ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ : 3768

ಸದಸ್ಯರ ಹೆಸರು : ಶ್ರೀ ಗೋಪಾಲಕೃಷ್ಣ ಬೇಳೂರು.ಕೆ(ಸಾಗರ)

ವಿಷಯ : ಸಾಗರ ತಾಲ್ಲೂಕು ಕೆಳದಿಯ ವಸತಿಶಾಲೆ ನಿರ್ಮಾಣ

ಸಚಿವರ ಹೆಸರು ಮತ್ತು ಪದನಾಮ : ಶ್ರೀ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು)

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕು ವ್ಯಾಪ್ತಿಯಲ್ಲಿ ಇರುವ ವಸತಿ ಶಾಲೆಗಳ ಸಂಖ್ಯೆ ಎಷ್ಟು? ಹಾಗೂ ಅವು ಯಾವುವು? (ಇವುಗಳಲ್ಲಿ ಸರ್ಕಾರಿ, ಅನುದಾನಿತ, ಖಾಸಗಿವಾರು ವಿವರಗಳನ್ನು ನೀಡುವುದು)	ಶಿವಮೊಗ್ಗ ಜಿಲ್ಲೆಯ(ಸಾಗರ ತಾಲ್ಲೂಕು ವ್ಯಾಪ್ತಿಯಲ್ಲಿ ವಸತಿ ಶಾಲೆಗಳು ಇರುವುದಿಲ್ಲ.
ಆ	ಈ ವಸತಿ ಶಾಲೆಗಳಲ್ಲದೇ ಬೇರೆ ವಸತಿ ಶಾಲೆಗಳನ್ನು ಪ್ರಾರಂಭಿಸಲು ಸರ್ಕಾರ ಉದ್ದೇಶಿಸಿದೆಯೇ?	ಇಂತಹ ಯಾವುದೇ ಪ್ರಸ್ತಾಪ ಸರ್ಕಾರದ ಮುಂದೆ ಇರುವುದಿಲ್ಲ.
ಇ	ಹಾಗಿದ್ದಲ್ಲಿ ಯಾವ ಯಾವ ಸ್ಥಳದಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿದೆ?	ಅನ್ವಯಿಸುವುದಿಲ್ಲ.
ಈ	ಕೆಳದಿಯಲ್ಲಿ ವಸತಿ ಶಾಲೆ ಪ್ರಾರಂಭಿಸುವ ವಿಚಾರ ಯಾವ ಹಂತದಲ್ಲಿದೆ?	ಕೆಳದಿಯಲ್ಲಿ ವಸತಿ ಶಾಲೆಯನ್ನು ಪ್ರಾರಂಭಿಸುವ ಪ್ರಸ್ತಾಪ ಸದ್ಯಕ್ಕೆ ಇರುವುದಿಲ್ಲ.
ಉ	ವಿಳಂಬಕ್ಕೆ ಕಾರಣಗಳೇನು?	
ಊ	ಇದನ್ನು ಯಾವಾಗ ಅನುಷ್ಠಾನಗೊಳಿಸಲಾಗುತ್ತದೆ?	

ಶ್ರೀ ಕೆ. ಗೋಪಾಲಕೃಷ್ಣ ಬೇಳೂರು : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಅವರು ಪ್ರತಿಯೊಂದು ಪ್ರಶ್ನೆಗೂ ಅನ್ವಯಿಸುವುದಿಲ್ಲ, ಇಲ್ಲವೆಂದು ಉತ್ತರವನ್ನು ಕೊಟ್ಟಿದ್ದಾರೆ. ನನ್ನ ಕ್ಷೇತ್ರವಾದ ಸಾಗರದಲ್ಲಿ ವಸತಿ ಶಾಲೆಗಳು ಇದೆಯೇ, ಎಂದು ಕೇಳಿದ್ದೆ. ಅದಕ್ಕೆ ಅವರು ಇಲ್ಲವೆಂದು ಹೇಳಿದ್ದಾರೆ. ಅದೇ ರೀತಿಯಲ್ಲಿ, ಶಿವಮೊಗ್ಗ ಜಿಲ್ಲೆಯಲ್ಲಿ ಇದೆಯೇ, ಎಂದು ಕೇಳಿದ್ದೆ. ಅದಕ್ಕೆ ಇಲ್ಲವೆಂದು ಉತ್ತರವನ್ನು ಕೊಟ್ಟಿದ್ದಾರೆ, ಹಾಗಾದರೆ ಅವರು ಜಿಲ್ಲೆಯಲ್ಲಿ ಕೊಟ್ಟಿದ್ದಾರೆ. ಇವರು ಇಡೀ ಶಿವಮೊಗ್ಗ ಜಿಲ್ಲೆಯಲ್ಲಿ ವಸತಿ ಶಾಲೆಗಳು ಇಲ್ಲವೆಂದು ಉತ್ತರವನ್ನು ಕೊಟ್ಟಿದ್ದಾರೆ. ಅದಕ್ಕೆ ಮಾನ್ಯ ಮಂತ್ರಿಯವರು ವಿವರಗಾಗಿ ಉತ್ತರವನ್ನು ಕೊಡಬೇಕು.

ಡಾ.ವೈ.ನಾಗಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕು ವ್ಯಾಪ್ತಿಯಲ್ಲಿ ಇರುವ ವಸತಿ ಶಾಲೆಗಳ ಸಂಖ್ಯೆ ಎಷ್ಟು? ಹಾಗೂ ಅವು ಯಾವವು? ಎಂದು ಪ್ರಶ್ನೆ ಕೇಳಿದ್ದಾರೆ. ಅದಕ್ಕೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ಇವರು ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನಲ್ಲಿ ಎಷ್ಟು ವಸತಿ ಶಾಲೆಗಳು ಎಷ್ಟು ಎಂದು ಕೇಳಿರುವಂಥಾದ್ದು.

ಶ್ರೀ ಕೆ. ಗೋಪಾಲಕೃಷ್ಣ ಬೇಳೂರು : ಮಾನ್ಯ ಅಧ್ಯಕ್ಷರೇ, ಸಾಗರ ತಾಲ್ಲೂಕಿನ ಕೆಳದಿ ಎಂಬುದು ಪ್ರಸಿದ್ಧವಾದ ಸ್ಥಳವಾಗಿದೆ. ಈಗಾಗಲೇ ಅಲ್ಲಿ ವಸತಿ ಶಾಲೆಗೆ ಜಾಗವು ಸಹ ಮಂಜೂರು ಆಗಿದೆ. ಮಾನ್ಯ ಮಂತ್ರಿಯವರು ದಯವಿಟ್ಟು ಇದರ ಬಗ್ಗೆ ಕ್ರಮ ತೆಗೆದುಕೊಂಡು ಸಾಗರ ತಾಲ್ಲೂಕಿನಲ್ಲಿ ವಸತಿ ಶಾಲೆಯಾಗುವ ಹಾಗೆ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ. ವೈ. ನಾಗಪ್ಪ : ಮಾನ್ಯ ಅಧ್ಯಕ್ಷರೇ, ಇದುವರೆಗೂ ಯಾವುದೇ ಪ್ರಸ್ತಾಪ ಬಂದಿಲ್ಲ. ಆ ರೀತಿ ಪ್ರಸ್ತಾಪ ಬಂದ ಮೇಲೆ ನಾವು ಖಂಡಿತವಾಗಿ ಕೊಡುತ್ತೇವೆ.

ಅಧ್ಯಕ್ಷರು : ಮಾನ್ಯ ದಿನೇಶ್ ಗುಂಡುರಾವ್‌ರವರ ಪ್ರಶ್ನೆ ಆರೋಗ್ಯ ಇಲಾಖೆಗೆ ವರ್ಗಾವಣೆಯಾಗಿದೆ. ನಾಳೆ ಮಾನ್ಯ ಮಂತ್ರಿಯವರು ಸದನಕ್ಕೆ ಬಂದಾಗ ತಮಗೆ ಅವಕಾಶವನ್ನು ಕೊಡುತ್ತೇನೆ.